ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು) :

ಅ) ಮತ್ತು ಆ)ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲು ಸರ್ಕಾರವು ಬಹಳ ಉತ್ಸುಕವಾಗಿದೆ. ಈಗಿರುವ ರನ್‌ವೆ ಸಂಖ್ಯೆ:05: 23ಅನ್ನು ಎರಡು ಬದಿಯಲ್ಲಿಯೂ 100 ಮೀಟರ್ ವಿಸ್ತರಿಸಿ ಉಪಯೋಗಿಸುವ ಬಗ್ಗೆ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದ ಹಿರಿಯ ಅಧಿಕಾರಿಗಳೊಂದಿಗೆ ಪತ್ರವ್ಯವಹಾರ ಮಾಡಲಾಗಿತ್ತು ಮತ್ತು ಈ ವಿಷಯದಲ್ಲಿ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆಯಲ್ಲಿ ಪ್ರಸ್ತಾವಿಸಲಾಗಿತ್ತು.

ಇ) ಭಾರತ ಸರ್ಕಾರದ ನಾಗರೀಕ ವಿಮಾನಯಾನ ಸಚಿವರು ರಾಜ್ಯ ಸರ್ಕರಕ್ಕೆ ಬರೆದ ಇತ್ತೀಚಿನ ತಮ್ಮ ಪತ್ರದಲ್ಲಿ ರನ್‌ವೇ ಸಂಖ್ಯೆ : 05:23ಅನ್ನು ಸುರಕ್ಷಾತಾ ದೃಷ್ಟಿಯಿಂದ (ಒಂದು ಕಡೆ ಚಾಮುಂಡಿಬೆಟ್ಟ ಮತ್ತು ಇನ್ನೊಂದು ಕಡೆ ರೈಲ್ವೆ ಟ್ರಾಕ್ ಇರುವ ಕಾರಣ) ವಿಸ್ತರಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದಾರೆ. ಮತ್ತು ಇನ್ನೊಂದು ರನ್‌ವೇ ಆದ 09:27ಅನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸುತ್ತಾ, ಇದಕ್ಕಾಗಿ ರಾಜ್ಯ ಸಕಾರವು 140 ಎಕರೆ ಭೂಮಿಯನ್ನು ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾಕ್ಕೆ ಹಸ್ತಾಂತರಿಸಬೇಕೆಂದು ಕೋರಿದ್ದಾರೆ. ಈ ವಿಷಯದಲ್ಲಿ ಮುಂದಿನ ಸೂಕ್ತಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಮೈಸೂರು ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಕಾರ್ಮಿಕರು

273 (272): ಶ್ರೀ ಶಂಕರಲಿಂಗೇಗೌಡ, ಹೆಚ್.ಎಸ್. (ಚಾಮರಾಜ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ಯಾವ ಯಾವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿವೆ;

ಆ) ಅವುಗಳ ಪೈಕಿ ಯಾವ ಯಾವ ಕಾರ್ಖಾನೆಗಳಲ್ಲಿ ಎಷ್ಟೆಷ್ಟು ಕಾರ್ಮಿಕರಿದ್ದಾರೆ;

ಇ) ಸದರಿ ಕಾರ್ಮಿಕರ ಪೈಕಿ ಯಾವ ಯಾವ ಕಾರ್ಖಾನೆಗಳಲ್ಲಿ ಎಷ್ಟೆಷ್ಟು ಮಂದಿ ಕನ್ನಡೇತರರು ಇರುವರು;

ಈ) ಕೈಗಾರಿಕೆ ಒಂದರಲ್ಲಿ ಕನ್ನಡಿಗರು ಕನ್ನಡೇತರರು ಇವರುಗಳ ಅನುಪಾತ ನಿಯಮಾನುಸಾರ ಎಷ್ಟಿರಬೇಕೋ ಅಷ್ಟಿದೆಯೇ ಎಂಬ ಬಗ್ಗೆ ಗಮನಿಸಲಾಗಿದೆಯೇ; ವಿವರ ನೀಡುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿ ಒಟ್ಟು 79 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿದ್ದು ಅವುಗಳು ಎಲ್ಲೆಲ್ಲಿವೆ ಎಂಬ ವಿವರಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸಿದೆ.

ಆ) ಒಟ್ಟು ಕಾರ್ಮಿಕರು 22579 ವಿವರಗಳ ಪಟ್ಟಿ ಲಗತ್ತಿಸಿದೆ.

ಇ) ಒಟ್ಟು ಕನ್ನಡಿಗರು 20710 ಒಟ್ಟು ಕನ್ನಡೇತರರು 1869 ವಿವರಗಳನ್ನೊಳಗೊಂಡ ಪಟ್ಟಿ ಲಗತ್ತಿಸಿದೆ.

ಈ) ಸರ್ಕಾರಿ ಆದೇಶ ಸಂಖ್ಯೆ ಸಿಇ 45 ಐ.ಎಪಿ 90 ದಿನಾಂಕ 18–1–91 ಪ್ರಕಾರ ಸಿ ಮತ್ತು ಡಿ ಕ್ಯಾಟಗರಿಯಲ್ಲಿ ಶೇ. 100 ರಷ್ಟು ಕನ್ನಡಿಗರು ಇರಬೇಕು. ಒಟ್ಟು ಕಾರ್ಮಿಕರಲ್ಲಿ ಶೇ. 80 ರಷ್ಟು ಕನ್ನಡಿಗರು ಇರಬೇಕು ಎಂಬ ನಿಯಮವಿದೆ. ಈ ನಿಯಮ ಅನುಸರಣೆ ಕುರಿತು ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಗಳಲ್ಲಿ ಪರಿಶೀಲಿಸಲಾಗುತ್ತಿದೆ.

ಅನುಬಂಧ -1

ಮೈಸೂರು ಜಿಲ್ಲೆಯಲ್ಲಿ ಡಾ: ಸರೋಜಿನ ಮಹಿಷಿ ವರದಿಯಡಿ ಬರುವ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ವಿವರ:

ಕ್ರ ಸಂ.	ಘಟಕಗಳ ಹೆಸರು ಮತ್ತು ವಿಳಾಸ ಮೆ:	ಕನ್ನಡಿಗರು	ಇತರರು	ಒಟ್ಟು	ಶೇಕಡಾ ಷರಾ ವಾರು
1.	ರಾಣಿ ಮದ್ರಾಸ್, ನೊ.87, 84, ಹೊಟಗಳ್ಳಿ ಕೈಗಾರಿಕಾ ಪ್ರದೇಶ, ಮೈಸೂರು	257	11	268	95.90
2.	ರೆಕಿಟ್ ಬೋಸ್ಟರ್, ನ.61, 62, ಹೊಟಗಳ್ಳಿ ಕೈಗಾರಿಕಾ ಪ್ರದೇಶ ಮೈಸೂರು	120	07	127	94.50
3.	ಜಿನಿತ್ ಟೆಕ್ಸ್‌ಟೈಲ್ ನಂ.13.ಎ 12ಬಿ, ನಂಜನಗೂಡು ಕೈಗಾರಿಕಾ ಪ್ರದೇಶ	143	02	145	99
4.	ರಾಜಶ್ರೀ ಪೇಪರ್ ಲಿ, ನಂ. 6ಎ, ಕೈಗಾರಿಕಾ ಪ್ರದೇಶ ನಂಜನಗೂಡು	84	10	94	89
5.	ದಿ. ಸೌತ್ ಇಂಡಿಯಾ ಪೇಪರ್ ಲಿ, ನಂಜನಗೂಡು	377	05	382	98.7
6.	ರಾಮನ್ ಬೋರ್ಡ್ ಲಿ, ಮೈಸೂರು ಊಟಿ ರಸ್ತೆ ತಾಂಡವಪುರ	216	01	217	99.5
7.	ಜಮಿನಿ ಡಿಸ್ಟಲರೀಸ್ ಪ್ರೈ ಲಿ. ಚಾಮರಾಜನಗರ ರಸ್ತೆ ನಂಜನಗೂಡು	75	03	78	96
8.	ಸೂಪರ್ ಫೈನ್ ಆರೋಮೆಟಿಕ್ ಕಂ.ಪೈ ಲಿ. ಕೈಗಾರಿಕಾ ಪ್ರದೇಶ ನಂಜನಗೂಡು	66	02	58	96.5
9.	ವಿಷ್ಣು ಟೆಕ್ಸ್‌ಟೈಲ್ಸ್ ಪ್ರೈ ಲಿ. ಕಂಪಲಾಪುರ ಪಿರಿಯಾಪಟ್ಟಣ ತಾ:	131	16	147	89
10.	ಶ್ರೀ ಗಣೇಶ್ ಗೇರ್ಸ್ ಪೈ. ಲಿ. ನಂ.1106. ಬೆಳಗೊಳ ಕೈಗಾರಿಕಾ ಪ್ರದೇಶ, ಮೈಸೂರು	168	–	168	100
11.	ಬೆಮಲ್, ಬೆಳವಾಡಿ ಕೈಗಾರಿಕಾ ಪ್ರದೇಶ	1914	65	1979	96.7
12.	ವಿಕ್ರಾಂತ್ ಟೈರ್ಸ್ ಲಿ. ಕೆ.ಆರ್.ಎಸ್. ರಸ್ತೆ ಮೇಟಗಳ್ಳಿ, ಮೈಸೂರು	2087	136	2223	98.3
13.	ಟೈಟಾನ್ ವಾಲ್ಸ್, ಬೆಳವಾಡಿ ಕೈಗಾರಿಕಾ ಪ್ರದೇಶ, ನಂಜನಗೂಡು	319	6	325	98.15
14.	ದಸಾರಿ ಸ್ಪಿನ್ನಿಂಗ್ ಮಿಲ್ ಲಿ, ಕೈಗಾರಿಕಾ ಪ್ರದೇಶ ನಂಜನಗೂಡು	252	0	252	100

1	2	3	4	5	6	7
15.	ಇಂಡಿಯಾ ಎಲೆಕ್ಟಿಕಲ್ಸ್ ಲಿ. ಕೈಗಾರಿಕಾ ಪ್ರದೇಶ ಮೈಸೂರು	320	28	348	92	
16.	ವಿಷ್ಣು ಪೋರ್ಜ್ಸ್ ಪೈ.ಲಿ ಕೆ.ಆರ್. ಎಸ್. ರಸ್ತೆ ಮೈಸೂರು	159	12	171	93	
17.	ಮಾರೀಸ್ ಸ್ಪಿನ್ನಿಂಗ್, ಪೈ.ಲಿ. ಕಟ್ಟೆ ಮಳಲವಾಡಿ ಹುಣಸೂರು ತಾ:	310	60	370	84	
18.	ಶಿವಕುಮರ್ ವೆಲ್ ಟೆಕ್ಸ್‌ಟೈಲ್ಸ್ ಲಿ. ಬೆಟ್ಟದಪುರ ಪಿರಿಯಪಟ್ಟಣ ತಾ:	200	25	225	89	
19.	ವಿಜಯಾ ವೈರ್ಸ್ ಪೈ.ಲಿ. ಕೆ.ಆರ್. ಎಸ್. ರಸ್ತೆ ಮೆಲುಗಳ್ಳಿ ಮೈಸೂರು	272	5	277	98	
20.	ಲಾರ್ಸನ್ ಟಿಬ್ರೋ ಲಿ, ಹೊಟಗಳ್ಳಿ ಕೈಗಾರಿಕಾ ಪ್ರದೇಶ ಹುಣಸೂರು	500	199	699	81	
21.	ಕಂಬೈನ್ಡ್ ಇಂಡಸ್ಟೀಸ್ ಲಿ. ಕೈಗಾರಿಕಾ ಸಬರ್ಬ್ ಮೈಸೂರು	203	9	212	96	
22.	ಅಡ್ವಾನ್ಸ್ ಕಾಂಪೋನೆಂಟ್ಸ್ ಪೈ.ಲಿ. ಬೆಳವಾಡಿ ಕೈ. ಪ್ರದೇಶ ಮೈಸೂರು	71	71	71	100	
23.	ಡಿಸೆಬ್ರೋ ಇನ್‌ಫರ್‌ಮೆಟಿಕ್ ನಂ. 126, ಬೆಳಗೊಳ ಕೈಗಾರಿಕಾ ಪ್ರದೇಶ, ಮೈಸೂರು	178	40	208	81	
24.	ಮೈಸೂರು ಪ್ಯಾನಲ್ಸ್ ಬೋರ್ಡ್ ಪೈ.ಲಿ.ಕೈಗಾರಿಕಾ ವಲಯ, ತಾಂಡವಪುರ	50	9	59	85	
25.	ಬರೂಕ ಅಲ್ಯಮಿನಿಯಂ ಲಿ, ಕೆ.ಆರ್. ಎಸ್.ರಸ್ತೆ ಮೈಸೂರು	155	50	205	61	
26.	ಡಿ.ವಿ. ಪ್ಯಾರಿ (ಇಂಡಿಯಾ) ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಮೈಸೂರು	120	9	129	93	
27.	ಮೀನಾಕ್ಷಿ ಸುಂದರಂ ಟೆಕ್ಸ್‌ಟೈಲ್ಸ್ ಲಿ, ಬೆಳತ್ತೂರು ಕಲ್ಲುಣಿಕೆ, ಹುಣಸೂರು ತಾ:	302	25	327	92	
28.	ಕಾರ್ಬೋ ಸಿರಾಮಿಕ್ಸ್ ಬೆಳವಾಡಿ ಕೈಗಾರಿಕಾ ಪ್ರದೇಶ ಮೈಸೂರು	56	2	58	99	
29.	ಕಿರ್ಲೋಸ್ಕರ್ ಎಲೆಕ್ಟ್ರಿಕಲ್ ಕಂ.ಲಿ. ಯೂನಿಟ್–4 ಬೆಳವಾಡಿ ಕೈ. ಪ್ರದೇಶ, ಮೈಸೂರು	316	21	337	94	

1	2	3	4	5	6	7
30.	ಹುಣಸೂರು ಪ್ಲೈವುಡ್ ವರ್ಕ್ಸ್ ಹುಣಸೂರು	171	7	178	99	
31.	ವಿಪ್ರೋ ಲಿ. ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಮೈಸೂರು	100	8	108	99	
32.	ಬಿಜೆಸಿ ಸ್ಯಕ್ಸ್ ಪೈ.ಲಿ. 11ನೇ ಮೈನ್ ಕಡಕೊಳ ಮೈಸೂರು	140	6	146	99	
33.	ಆಟೊಮೋಟಿವ್ ಆಕ್ಸ್‌ಲಿ ಲಿ, ಹೊಟಗಳ್ಳಿ, ಮೈಸೂರು	882	12	894	90	
34.	ಪಾಲ್ಕನ್ ಟೈರ್ಸ್ ಲಿ, ಕೆ.ಆರ್. ಎಸ್. ರಸ್ತೆ ಮೈಸೂರು	500	34	534	97	
35.	ಮೈಸೂರು ಜಿಪ್‌ಬೋರ್ಡ್ ಲಿ, ಬೆಳವಾಡಿ, ಮೈಸೂರು	390	60	450	88	
36.	ಮೈಸೂರು ಪಾಲಿಮರ್ಸ್ ರಬ್ಬರ್ ಪ್ರಾಡಕ್ಟ್, ಕೆ.ಆರ್. ಎಸ್. ರಸ್ತೆ ಮೈಸೂರು	339	14	353	94	
37.	ಜಗದಾಳೆ ಇಂಡಸ್ಟ್ರೀಸ್ ಲಿ, ಪ್ಲಾಟ್ ನಂ310 ಹೆಬ್ಬಾಳು ಕೈ. ಪ್ರದೇಶ ಮೈಸೂರು	28	5	33	85	
38	ಬ್ರೂಕ್ ಬ್ಯಾಂಡ್ ಇಂಡಿಯಾ ಲಿ, ಆಫ್‌ಸೆಟ್, ಹೆಬ್ಬಾಳು ಕೈ ಪ್ರದೇಶ ಮೈಸೂರು	100	42	142	70	
39.	ದೀಪ ಆಕ್ಸಿಜನ್ ಪ್ರೈ ಲಿ. ಮೇಟಗಳ್ಳಿ, ಕೈಗಾರಿಕಾ ಪ್ರದೇಶ ಮೈಸೂರು	65	5	70	92	
40.	ಎ.ಸಿ.ಎನ್. ಕೇಬಲ್ ಲಿ. ಮೇಟಗಳ್ಳಿ, ಕೈಗಾರಿಕಾ ಪ್ರದೇಶ, ಮೈಸೂರು	145	20	165	88	
41.	ಒ.ಕೆ. ಎಸ್. ಸ್ಪೆಷಲಿಸ್ಟ್ ಜಿಯಾ ಲೂಬ್ರಿಕೇಟ್ಸ್ ಹೆಬ್ಬಾಳು ಕೈ. ಪ್ರದೇಶ, ಮೈಸೂರು	70	12	82	85	
42.	ರೆಮಿಂಗ್‌ಟನ್ ರ್ಯಾಂಡ್ (ಇಂಡಿಯಾ) ಲಿ, ಕೈಗಾರಿಕಾ ಪ್ರದೇಶ, ಹೆಬ್ಬಾಳು, ಎ.ಪ್ರದೇಶ ಮೈಸೂರು	90	6	96	90	
43.	ರಾಜ್‌ಕಮಲ್ ಪಾಲಿಮರಸ್ಸ್ ಮೇಟಗಳ್ಳಿ, ಕೈಗಾರಿಕಾ ವಲಯ ಮೈಸೂರು	70	10	80	87	
44.	ಇಂಡಿಯಾಸಿಸ್ಟನ್ ರ್ಯಾಮ್ಸ್ ಬೆಳವಾಡಿ ಕೈಗಾರಿಕಾ ಪ್ರದೇಶ ಮೈಸೂರು	85	15	100	85	

1	2	3	4	5	6	7
45.	ವೆನ್ ಲಾನ್ ಪಾಲಿಮರ್ಸ್ ಬೆಳವಾಡಿ ಕೈ. ಪ್ರದೇಶ, ಹುಣಸೂರು ರಸ್ತೆ, ಮೈಸೂರು	160	36	196	81	
46.	ಸ್ಯಾನ್ಸ್ ಟ್ರಾನ್ಸ್‌ಮಿಷನ್ ಹೆಬ್ಬಾಳು ಕೈಗಾರಿಕಾ ಪ್ರದೇಶ ಮೈಸೂರು	58	12	70	82	
47.	ಹಿಂದುಸ್ತಾನ್ ಆಯಿಲ್ ಕಾರ್ಪೋರೇಷನ್, ಎಲ್‌ಪಿಜಿ ಲಿಂಗ್ ಪ್ಲಾಂಟ್ ಹೆಬ್ಬಾಳು ಕೈ ಪ್ರದೇಶ, ಮೈಸೂರು	60	45	105	80	
48.	ಜಿ.ಟಿ. ಶೋಲ್ಡರ್ ಮೇಟಗಳ್ಳಿ ಕೈಗಾರಿಕಾ ಪ್ರದೇಶ ಮೈಸೂರು	30	5	35	95	
49.	ವಿಕ್ರಾಂತ್ ರೇಡಿಯಂಟ್ ಪ್ಲಾಂಟ್, ಹೆಬ್ಬಾಳ್ ಕೈ ಪ್ರದೇಶ, ಮೈಸೂರು	290	40	330	67	
50.	ಎ.ಎಸ್.ಟಿ. ಪ್ರಿಷಿಷನ್ ಕಾಂಪೋನೆಂಟ್ಸ್ ಕೆ.ಆರ್.ಎಸ್. ರಸ್ತೆ, ಮೈಸೂರು	98	8	106	98	
51.	ಮ್ಯಾಣಿಕ್ಯ, ಪ್ಲಾಟಿಜೆಮ್ ಪ್ರೈ ಲಿ, ಬೆಳವಾಡಿ ಕೈಗಾರಿಕಾ ಪ್ರದೇಶ ಮೈಸೂರು	85	20	105	88	
52.	ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್ ಮೇಟಗಳ್ಳಿ ಮೈಸೂರು	140	2	142	99	
53.	ರೀಡ್ ಅಂಡ್ ಟೈಲರ್ ಕೈಗಾರಿಕಾ ವಲಯ, ತಾಂಡವಪುರ, ನಂಜನಗೂಡು ತಾ:	1082	76	1158	93	
54.	ಟಿಡಿಎಸ್ ಮೋಟಾರ್ ಕಂಪನಿ, ಬ್ಯಾತಹಳ್ಳಿ, ಕಡಕೊಳ ಮೈಸೂರು ತಾ:	456	157	613	74	
55.	ಮೋಹನ್ ವುಲ್ಲನ್ ಮಿಲ್ಸ್ ಕೆ.ಆರ್. ನಗರ ರಸ್ತೆ ಬೆಳತ್ತೂರು ಗ್ರಾಮ, ಹುಣಸೂರು ತಾ:	156	0	156	100	
56.	ಜುಬಿಲಿಯೆಂಟ್ ಆರ್ಗನೈಸರ್ಸ್, ಕೈಗಾರಿಕಾ ವಲಯ ನಂಜನಗೂಡು	221	28	249	89	
57.	ನೆಸ್ಲೆ ಇಂಡಿಯಾ ಲಿ, ಕೈಗಾರಿಕಾ ಪ್ರದೇಶ ಮೈಸೂರು	196	22	218	89	
58.	ಬಳ್ಳಾಪುರ ಇಂಡಸ್ಟ್ರಿಸ್ ಲಿ, ನಂಜನಗೂಡು	81	16	97	83	
59.	ಎ.ಟಿ. ಅಂಡ್ ಎಸ್. ಇಂಡಿಯಾ, ಕೈಗಾರಿಕಾ ಪ್ರದೇಶ ನಂಜನಗೂಡು	633	10	643	98	

1	2	3	4	5	6	7
60.	ಚಾಮುಂಡಿ ಟೆಕ್ಸ್‌ಟೈಲ್ಸ್ (ಸಿಲ್ಕ್ ಮಿಲ್) ಲಿ, ಹೊಟಗಳ್ಳಿ ಕೈ. ಪ್ರದೇಶ, ಮೈಸೂರು	90	12	102	88	
61.	ಪ್ರಿಷಿಸನ್ ಪ್ಯಾನಲ್ ಬೋರ್ಡ್, ನೆಸ್ಲೆ ರಸ್ತೆ, ಕೈಗಾರಿಕಾ ಪ್ರದೇಶ, ನಂಜನಗೂಡು	134	5	139	96.4	
62.	ಅಟ್ಲಾಂಟಿಕ್ ಸ್ಪಿನ್ನಿಂಗ್ ವರ್ಕ್ಸ್ ಲಿ., ಮೈಸೂರು ಬೆಂಗಳೂರು ರಸ್ತೆ, ಮೈಸೂರು	266	35	301	88	
63.	ಶ್ರೀ ಸಾಯಿಲಕ್ಷ್ಮಿ ಇಂಡಸ್ಟ್ರೀಸ್, ತಾಂಡ್ಯ ಕೈ. ಪ್ರದೇಶ ನಂಜನಗೂಡು	271	38	309	87	
64.	ಬನ್ನಾರಿ ಅಮ್ಮನ್ ಶುಗರ್ಸ್ ಶುಗರ್ಸ್ ಅಳಗಂಜಿ ನಂಜನಗೂಡು ತಾ:	379	91	470	80.83	
65.	ಇನ್‌ಫೋಸಿಸ್ ಟೆಕ್ನಾಲಜೀಸ್ ಲಿ., ಹೆಬ್ಬಾಳು ಮೈಸೂರು	254	93	347	73	
66.	ಜೇಪ್ ಬ್ಯಾಟರೀಸ್ (ಇಂಡಿಯಾ) ಪ್ರೈ ಲಿ., ಬೆಳವಾಡಿ, ಮೈಸೂರು	157	4	161	98	
67.	ಸಭಾಷ್ ಪ್ಲೈಮ್ ಪ್ರೈ ಲಿ ರಂಗನಾಥಪುರ, ಟಿ. ನರಸೀಪುರ ತಾ:	27	23	50	53	
68.	ಶ್ರೀರಾಮ ಸಕ್ಕರೆ ಕಾರ್ಖಾನೆ, ಚುಂಚನಕಟ್ಟೆ, ಕೆ.ಆರ್. ನಗರ ತಾ:	578	0	578	100	
69.	ಆವಸರಲ ಟಿಂಗಸ್ಟನ್ ಹೊಟಗಳ್ಳಿ ಕೈಗಾರಿಕಾ ಪ್ರದೇಶ ಮೈಸೂರು	60	0	60	100	
70.	ಗ್ಲೋಟ್ರಾನಿಕ್ಸ್ ಲಿ, ಹೂಟಗಳ್ಳಿ ಕೈ ಪ್ರದೇಶ ಮೈಸೂರು	27	0	27	100	
71.	ಮೈಸೂರು ಹಾಲು ಉತ್ಪಾದಕರ ಮಹಾಮಂಡಳಿ ಮೈಸೂರು	449	0	449	100	
72.	ಆರ್‌ಸಿಜಿ ಟೆಲಿಕಾಮ್ ಲಿ, ಹೆಬ್ಬಾಳು ಕೈಗಾರಿಕಾ ಪ್ರದೇಶ ಮೈಸೂರು	135	15	150	90	
73.	ಸರ್ಕಾರಿ ರೇಷ್ಮೆ ಕಾರ್ಖಾನೆ, ಮಾನಂದವಾಡಿ ರಸ್ತೆ ಮೈಸೂರು	639	0	639	100	
74.	ಸುದರ್ಶನ್ ಟೆಲಿಕಾಂ ಲಿ, ನಂ. 386, ಹೆಬ್ಬಾಳು	52	7	59	88	
75.	ಎಜ್ಡೆ ಡಿಸ್ಟಲರೀಸ್, ಬನ್ನಿಮಂಟಪ ಲೇಔಟ್, ಮೈಸೂರು	19	19	19	100	

1	2	3	4	5	6	7
76.	ಅಡ್ವಾನ್ಸ್ ಲೈಟಿಂಗ್ ಕಂಪನಿ ಲಿ, ತಾಂಡವಪುರ ನಂಜನಗೂಡು ತಾ:	55	0	55	100	
77.	ಬಜೇಕ ಪೇಪರ್ ಮಿಲ್ಸ್ ನಂಜನಗೂಡು ಕೈ ಪ್ರದೇಶ, ನಂಜನಗೂಡು	625	50	675	63	
78.	ಬರ್ಕಾಡಿ ಮಾರ್ಟಿನ್ ಪ್ರೈಲಿ., ಜೆಮಿನಿ, ನಂಜನಗೂಡು	75	5	80	94	
79.	ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿ, ಅಶೋಕಪುರ, ಮೈಸೂರು.	86	0	86	100	
		20710	1869	22579		

ಮೈಸೂರಿನಲ್ಲಿರುವ ಪಶುವೈದ್ಯ ಆಸ್ಪತ್ರೆಗಳು

274 (275): ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ ಕ್ಷೇತ್ರ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನಲ್ಲಿರುವ ಪಶುವೈದ್ಯ ಆಸ್ಪತ್ರೆಗಳೆಷ್ಟು; ವಿವರ ನೀಡುವುದು;

ಆ) ಸದರಿ ಆಸ್ಪತ್ರೆಗಳ ಪೈಕಿ ಸ್ವಂತ ಕಟ್ಟಡ ಹೊಂದಿಲ್ಲದ ಆಸ್ಪತ್ರೆಗಳು ಯಾವುವು;

ಇ) ಸ್ವಂತ ಕಟ್ಟಡ ಹೊಂದಿಲ್ಲದ ಸದರಿ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ಒದಗಿಸುವ ಸಲುವಾಗಿ ಇದುವರೆಗೆ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ; ಕೈಗೊಂಡ ಕ್ರಮದ ಫಲಿತಾಂಶವೇನು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಮೈಸೂರಿನಲ್ಲಿ ಒಟ್ಟು 5 ಪಶು ಆಸ್ಪತ್ರೆಗಳಿವೆ.

ಪಶುವೈದ್ಯ ಆಸ್ಪತ್ರೆಗಳ ವಿವರ

1. ನಗರ ಪಶು ಆಸ್ಪತ್ರೆ
2. ಚಾಮುಂಡಿಪುರಂ
3. ಕುಂಬಾರಕೊಪ್ಪಲು
4. ರಾಜೇಂದ್ರನಗರ
5. ಕನ್ನೇಗೌಡನ ಕೊಪ್ಪಲು

ಆ) ಪಶು ಆಸ್ಪತ್ರೆ, ಕನ್ನೇಗೌಡನ ಕೊಪ್ಪಲು ಗೆ ಸ್ವಂತ ಕಟ್ಟಡ ಇರುವುದಿಲ್ಲ.

ಇ) ಪಶುಆಸ್ಪತ್ರೆ, ಕನ್ನೇಗೌಡ ಕೊಪ್ಪಲು ಗೆ ನಿವೇಶನ ನೀಡಲು ಮೈಸೂರು ಮಹಾನಗರ ಪಾಲಿಕೆಯನ್ನು ಕೋರಲಾಗಿದೆ.

ರಾಜ್ಯದಲ್ಲಿ ಕಲ್ಲುಗಣಿಗಳಿಂದ ಬರುವ ಆದಾಯ

275 (581): ಶ್ರೀ ಸಿಂಧ್ಯ ಪಿ.ಜಿ.ಆರ್. (ಕನಕಪುರ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ?